

'ಈ ಪ್ರಕರಣ ಬಂದಾಗ ರೋಗಿಯನ್ನು ಸಂಪೂರ್ಣ ಪರೀಕ್ಷೆಗೊಳಪಡಿಸಲಾಯಿತು. ಜತೆಗೆ ಆಕೆಯ ಸ್ತನದಲ್ಲಿ ಐದು ಕೇಜಿ ಭಾರದ ಗಡ್ಡೆ ಇರುವುದು ಪತ್ತೆಯಾಯಿತು. ಅಲ್ಲದೆ ಇದು ಸಾಮಾನ್ಯ ಕ್ಯಾನ್ಸರ್‌ನಂತೆ ಕಾಣಲಿಲ್ಲ. ಕೂಲಂಕುಶವಾಗಿ ಪರಿಶೀಲಿಸಿದಾಗ ಆಕೆಗೆ ಸ್ತನದ ಚರ್ಮ ಕ್ಯಾನ್ಸರ್ ಎಂಬುದು ಬೆಳಕಿಗೆ ಬಂತು. ಇದರ ಶಸ್ತ್ರ ಚಿಕಿತ್ಸೆಯೂ ಸಂಕೀರ್ಣವಾಗಿದ್ದರಿಂದ ಈ ಪ್ರಕರಣ ಅತ್ಯಂತ ಸವಾಲಿನದ್ದು ಎನಿಸಿತ್ತು' ಎಂದು ವಿವರ ನೀಡುತ್ತಾರೆ ಸೈಟೆಕೇರ್ ಆಸ್ಪತ್ರೆಯ ಕ್ಯಾನ್ಸರ್ ಶಸ್ತ್ರ ಚಿಕಿತ್ಸಾ ತಜ್ಞ ಡಾ.ಅಂತೋನಿ ಪೈಸ್.

'ವ್ಯಕ್ತಿಯ ದೇಹದಲ್ಲಿ ಎರಡು ಬಗೆಯ ಚರ್ಮ ಕ್ಯಾನ್ಸರ್‌ಗಳಿರುತ್ತವೆ. ಒಂದು ಮೆಲನೋಮಾ ಹಾಗೂ ಇನ್ನೊಂದು ನಾನ್ ಮೆಲನೋಮಾ. ಜಗತ್ತಿನಾದ್ಯಂತ ಇರುವ ಚರ್ಮ ಕ್ಯಾನ್ಸರ್‌ನ ಪ್ರಕರಣವನ್ನು ತೆಗೆದುಕೊಂಡರೆ ಬಹುತೇಕ ಪ್ರಕರಣಗಳು ನಾನ್ ಮೆಲನೋಮಾಗಳದ್ದೇ ಆಗಿರುತ್ತವೆ. ನಾನ್ ಮೆಲನೋಮ ಚರ್ಮ ಕ್ಯಾನ್ಸರ್ ಪ್ರಕರಣ ಶೇ 96ರಷ್ಟು ಇದ್ದರೆ ಕೇವಲ ಶೇ.4ರಷ್ಟು ಮಾತ್ರ ಮೆಲನೋಮಾ ಕ್ಯಾನ್ಸರ್ ಇರುತ್ತದೆ. ಇಂಥ ಸಮಸ್ಯೆ ಅಮೀನಾರದ್ದು ಆಗಿತ್ತಲ್ಲದೆ ಈ ಪ್ರಕರಣದಲ್ಲಿ ಸ್ತನ ಚರ್ಮ ಕ್ಯಾನ್ಸರ್ ಅತ್ಯಂತ ಕ್ಲಿಷ್ಟಕರವಾದ ಮಟ್ಟಕ್ಕೆ ತಲುಪಿತ್ತು. ಈ ಸವಾಲನ್ನು ಯಶಸ್ವಿಯಾಗಿ ನಿರ್ವಹಿಸಿದ್ದೇವೆ. ಈಗ ರೋಗಿ ಸಂಪೂರ್ಣವಾಗಿ ಚೇತರಿಸಿಕೊಳ್ಳುವಂತಾಗಿದೆ' ಎಂದು ಹೇಳುತ್ತಾರೆ ಡಾ. ಅಂತೋನಿ.

'ಕೆಲವು ಕ್ಯಾನ್ಸರ್ ಪ್ರಕರಣಗಳಲ್ಲಿ ರೋಗವನ್ನು ನಿರ್ಣಯಿಸುವುದು ಬಹಳ ಕಷ್ಟವಾಗುತ್ತದೆ. ಈ ಸ್ತನ ಚರ್ಮ ಕ್ಯಾನ್ಸರ್ ಬರಲು ಯಾವುದೇ ಮುನ್ಸೂಚನೆ ಇರುವುದಿಲ್ಲ. ಆರಂಭಿಕ ಹಂತದಲ್ಲಿ ಯಾವ ಚಿಹ್ನೆಯೂ ಕಾಣಿಸಿಕೊಳ್ಳದ ಕಾರಣ ಸಮಸ್ಯೆ ಉಲ್ಬಣವಾದಾಗಲೇ ಬೆಳಕಿಗೆ ಬರುವುದು. ಮೇಲಾಗಿ ಇದು ಆನುವಂಶಿಕವೂ ಅಲ್ಲ. ಸೂರ್ಯನ ಅತಿನೇರಳೆ ಕಿರಣಗಳಿಗೆ ದೇಹವನ್ನು ಅತಿಯಾಗಿ ಒಡ್ಡಿಕೊಳ್ಳುವುದರಿಂದ ಈ ಸ್ತನ ಚರ್ಮ ಕ್ಯಾನ್ಸರ್ ಬರುವ ಸಾಧ್ಯತೆ ಅಧಿಕ' ಎಂದು ವಿವರ ನೀಡುತ್ತಾರೆ ಈ ವೈದ್ಯರು.

'ಅಮಿನಾ ಕಳೆದ ಮೂರು ವರ್ಷಗಳಿಂದ ಸ್ತನ ಚರ್ಮ ಕ್ಯಾನ್ಸರ್‌ನಿಂದ ಬಳಲುತ್ತಿದ್ದರು. ಇದಕ್ಕಾಗಿ ಸಾಕಷ್ಟು ಆ್ಯಂಟಿ ಬಯೋಟಿಕ್‌ಗಳನ್ನು ತೆಗೆದುಕೊಳ್ಳುತ್ತಿದ್ದರು. ವಿಪರೀತ ನೋವಿನಿಂದ ಕಷ್ಟಪಡುತ್ತಿದ್ದುದಲ್ಲದೆ ಸ್ತನದಿಂದ ಕೀವು ಕೂಡ ಸೋರುತ್ತಿತ್ತು. ಇದರಿಂದ ಜೀವನದಲ್ಲಿ ಸಾಕಷ್ಟು ನೋವನ್ನು ಅನುಭವಿಸಿದ್ದರು. ಇಲ್ಲಿ ಕೀಮೊಥೆರಪಿಯಿಂದ ಪ್ರಯೋಜನವಿಲ್ಲ, ಜತೆಗೆ ಮ್ಯಾಮೊಗ್ರಫಿಯಿಂದಲೂ ಯಾವುದೇ ಉಪಯೋಗವಿಲ್ಲ ಎಂಬುದನ್ನು ಮನಗಂಡು ಇವರಿಗೆ ಅಗತ್ಯವಿರುವ ಎಲ್ಲ ಪರೀಕ್ಷೆಗಳನ್ನು ಮಾಡಿ ಕೊನೆಗೆ ಶಸ್ತ್ರ ಚಿಕಿತ್ಸೆ ಮೂಲಕ ಗಡ್ಡೆಯನ್ನು ತೆಗೆಯಲಾಯಿತು' ಎಂದು ವಿವರಿಸುತ್ತಾರೆ ಡಾ. ಅಂತೋನಿ.

'ಅಭಿವೃದ್ಧಿಶೀಲ ರಾಷ್ಟ್ರಗಳಿಗೆ ಹೋಲಿಸಿದಲ್ಲಿ ಭಾರತದಲ್ಲಿ ಕ್ಯಾನ್ಸರ್‌ನಿಂದ ಸಾಯುವವರ ಸಂಖ್ಯೆ ಗಣನೀಯವಾಗಿ ಹೆಚ್ಚಿದೆ. ಕ್ಯಾನ್ಸರ್‌ನ ಚಿಹ್ನೆ ಗೊತ್ತಾದ ಕೂಡಲೇ ಚಿಕಿತ್ಸೆ ಪಡೆದರೆ ಸಮಸ್ಯೆ ತೀವ್ರವಾಗುವುದಿಲ್ಲ. ಆರಂಭದ ಚಿಕಿತ್ಸೆಯಿಂದ ಕ್ಯಾನ್ಸರ್ ಅನ್ನು ಶೇ.100 ರಷ್ಟು ಗುಣಪಡಿಸ ಬಹುದು. ಜತೆಗೆ ರೋಗಿಗೆ ಆತ್ಮವಿಶ್ವಾಸವೂ ಮುಖ್ಯ' ಎಂದು ಹೇಳುತ್ತಾರೆ ಸೈಟೆಕೇರ್ ಆಸ್ಪತ್ರೆಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಸುರೇಶ್ ರಾಮು.

## ಹೆಚ್ಚುತ್ತಿರುವ ಸ್ತನ ಕ್ಯಾನ್ಸರ್

ಭಾರತದಲ್ಲಿ, ಅದರಲ್ಲಿಯೂ ನಗರ ಪ್ರದೇಶಗಳಲ್ಲಿ ಸ್ತನ ಕ್ಯಾನ್ಸರ್‌ನಿಂದ ಬಳಲುವ ಮಹಿಳೆಯರ ಸಂಖ್ಯೆ ಹೆಚ್ಚಾಗುತ್ತಿದೆ. ಯುವತಿಯರನ್ನೂ ಇದು ಬಿಡದೆ ಕಾಡುತ್ತಿದೆ.

ಮಹಿಳೆಯರು ಕಾಲ ಕಾಲಕ್ಕೆ ತಪಾಸಣೆ ಮಾಡಿಸಿಕೊಳ್ಳಬೇಕು. ಮನೆಯಲ್ಲಿ ಕ್ರಮಬದ್ಧವಾಗಿ ತಮ್ಮ ಸ್ತನಗಳ ಸ್ವಯಂ ತಪಾಸಣೆ ಮಾಡಿಕೊಳ್ಳಲೂಬಹುದು, 40 ವರ್ಷಗಳಿಗಿಂತ ಕಡಿಮೆ ವಯಸ್ಸಿನ ಮಹಿಳೆಯರಿಗೆ ಅಲ್ಟ್ರಾಸೌಂಡ್ ಹಾಗೂ 40 ವರ್ಷಗಳಿಗಿಂತ ಹೆಚ್ಚಿನ ವಯೋಮಾನದ ಮಹಿಳೆಯರಿಗೆ ಮ್ಯಾಮೋಗ್ರಫಿ ಸೌಲಭ್ಯ ಲಭ್ಯವಿದೆ. .

ಆಹಾರದಲ್ಲಿ ಪಥ್ಯ, ತೂಕ ಕಡಿಮೆ ಗೊಳಿಸುವುದು, ಬಾಣಂತಿಯರು ಕಡ್ಡಾಯವಾಗಿ ಮಗುವಿಗೆ ಎರಡು ವರ್ಷ ತುಂಬುವವರೆಗೆ ಸ್ತನ್ಯಪಾನ ಮಾಡಿಸುವುದು ಸ್ತನ ಕ್ಯಾನ್ಸರ್ ಅನ್ನು ತಡೆಗಟ್ಟುವ ಸುಲಭ ವಿಧಾನ. ಸ್ತನ ಕ್ಯಾನ್ಸರ್ ಬಂದು ಅದು ಉಲ್ಬಣವಾದರೆ ಕೀಮೊಥೆರಪಿ, ಶಸ್ತ್ರ ಚಿಕಿತ್ಸೆ ಅನಿವಾರ್ಯವಾಗುತ್ತದೆ. ಏನೇ ಬಂದರೂ ಆತ್ಮವಿಶ್ವಾಸ, ಛಲ ಇದ್ದರೆ ಕ್ಯಾನ್ಸರ್ ಅನ್ನೂ ಗೆಲ್ಲಬಹುದು. ಹಾಗೆ ಮುಂಜಾಗ್ರತೆಯೇ ಆರೋಗ್ಯದ ಗುಟ್ಟು ಎಂಬುದನ್ನು ಮರೆಯಬಾರದು.

## ಮರುಜನ್ಮ ಪಡೆದೆ

'ಸ್ತನ ಚರ್ಮ ಕ್ಯಾನ್ಸರ್‌ಗೆ ಒಳಗಾದ ನಾನು ಕಳೆದ ಮೂರು ವರ್ಷಗಳಿಂದ ಸಾಕಷ್ಟು ನೋವು ಅನುಭವಿಸಿದೆ. ನವೆಂಬರ್ 2014 ರಲ್ಲಿ ನನ್ನ ಎಡ ಭಾಗದ ಸ್ತನದ ಮೇಲೆ ಒಂದು ಗಡ್ಡೆಯಿರುವುದನ್ನು ಇದ್ದಕ್ಕಿದ್ದಂತೆ ಕಂಡುಕೊಂಡೆ, ಅದನ್ನು ನೈಜೀರಿಯಾದ ಸ್ಥಳೀಯ ಆಸ್ಪತ್ರೆಯಲ್ಲಿ ತೋರಿಸಿದಾಗ ಇದು ತೀವ್ರವಾದ ಸ್ತನದ ಉರಿಯೂತ ಎಂದು ವೈದ್ಯರು ಹೇಳಿದರು. ಇದಕ್ಕಾಗಿ ಆ್ಯಂಟಿ ಬಯೋಟಿಕ್‌ಗಳನ್ನು ನೀಡಿದರು. ಆದರೆ ಈ ಸ್ಥಿತಿಯನ್ನು ಯಾರೊಂದಿಗೂ ಹಂಚಿಕೊಳ್ಳಲಾಗದೆ ಸಾಕಷ್ಟು ವೇದನೆ ಅನುಭವಿಸಿದೆ. ಸೂಕ್ತ ಚಿಕಿತ್ಸೆ ಮತ್ತು ಮಾರ್ಗದರ್ಶನದ ಕೊರತೆಯಿಂದ ಈ ಕ್ಯಾನ್ಸರ್ ಅತಿರೇಕಕ್ಕೆ ಹೋಗಿತ್ತು. ಜೀವನದಲ್ಲಿ ಭರವಸೆಯನ್ನೇ ಕಳೆದುಕೊಂಡ ನನಗೆ ಅಲ್ಲಿನ ವೈದ್ಯರು ಹಾಗೂ ಸ್ನೇಹಿತರ ಶಿಫಾರಸ್ಸಿನಿಂದಾಗಿ ಬೆಂಗಳೂರಿಗೆ ಬಂದು ಚಿಕಿತ್ಸೆ ಪಡೆಯುವಂತಾಯಿತು. ಈಗ ದೈಹಿಕ ಸ್ಥಿತಿ ಸುಧಾರಿಸಿದ್ದು, ಸಾಕಷ್ಟು ಚೇತರಿಸಿಕೊಂಡಿದ್ದೇನೆ. ಜೀವನದಲ್ಲಿ ಛಲ ಮತ್ತು ಆತ್ಮವಿಶ್ವಾಸವನ್ನೂ ಬೆಳೆಸಿಕೊಂಡಿದ್ದೇನೆ. ಬೆಂಗಳೂರಿನ ವೈದ್ಯರ ಸಹಕಾರದಿಂದ ನನಗೆ ಮರುಜೀವ ಬಂದಂತಾಗಿದೆ' ಎಂದು ಹೇಳುತ್ತಾರೆ ಶಸ್ತ್ರ ಚಿಕಿತ್ಸೆಗೊಳಗಾದ ಅಮಿನಾ.

ಮಹಿಳೆಯರು ಆರೋಗ್ಯದ ನಿಟ್ಟಿನಲ್ಲಿ ಯಾವುದೇ ಸಂಕೋಚ, ಮುಜುಗರ ಪಟ್ಟುಕೊಳ್ಳಬಾರದು. ಗರ್ಭಕೋಶ ಕ್ಯಾನ್ಸರ್, ಸ್ತನ ಕ್ಯಾನ್ಸರ್ ಸೇರಿದಂತೆ ಯಾವುದೇ ತೊಂದರೆ ಉಂಟಾದರೂ ತಕ್ಷಣ ತಜ್ಞ ವೈದ್ಯರನ್ನು ಸಂಪರ್ಕಿಸಿ ಚಿಕಿತ್ಸೆ ಪಡೆದುಕೊಳ್ಳಬೇಕು. ಕಾಯಿಲೆ ಉಲ್ಬಣವಾಗುವ ಮುನ್ನ ಚಿಕಿತ್ಸೆ ಪಡೆದರೆ ನೆಮ್ಮದಿಯ ಜೀವನ ನಡೆಸಬಹುದು.

